ಕುಂದಾಪುರ ಪಟ್ಟಣದಲ್ಲಿ ಸಮುದ್ರದ ಕೊರೆತ

೯೨ (೨೭೮) ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೊ ಕೋಪಯೋಗಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕುಂದಾಪುರ ಪುರಸಭೆಯ ವ್ಯಾಪ್ತಿಗೆ ಒಳಪಟ್ಟಿರುವ ''ಕೋಡಿ'' ಎಂಬಲ್ಲಿ ಸಮುದ್ರ ಕೊರೆತ ಸಂಭವಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ೧೯೮೩-೮೪ನೇ ಸಾಲಿಗೆ ಸಮುದ್ರ ಕೊರೆತಕ್ಕೊಳಗಾದ ಭೂ ಭಾಗ ವಿಸ್ತೀರ್ಣವೆಷ್ಟು?

ಇ) ಈ ಸಮುದ್ರ ಕೊರೆತದಿಂದ ಖಾಸಗಿ ಸಂಸ್ಥೆಯ ಉದ್ಯೋಗಸ್ಥರಿಗೆ ಸಂಭವಿಸಿದ ನಷ್ಟದ ಮೊತ್ತವೆಷ್ಟು? ಹಾಗೂ ಈ ಬಗ್ಗೆ ಸರ್ಕಾರದವರು ಕೊಡುವ ಪರಿಹಾರ ಧನವೆಷ್ಟು?

ಶ್ರೀ ಆರ್.ಎನ್. ಲಕ್ಷ್ಮಿಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಹೌದು.

ಆ) ೦.೫೬ ಹೆಕ್ಟೇರು.

ಇ) ಈ ವಿಷಯವು ನೀರಾವರಿಯ ಇಲಾಖೆಯ ಗಮನಕ್ಕೆ ಬಂದಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಇಲ್ಲಿ ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ''ಹೌದು'' ಎಂದು ಹೇಳಿದ್ದಾರೆ ಮತ್ತು ಕೊನೆಯ ಪ್ರಶ್ನೆಗೆ ಉತ್ತರವಾಗಿ ಈ ವಿಷಯವು ನೀರಾವರಿ ಇಲಾಖೆಯ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಆಂಗಲೆ ಅಲ್ಲಿನ ಜನತೆಗೆ ಆದ ನಷ್ಟ ಜನತಾ ಸರ್ಕಾರಕ್ಕೆ ತಿಳಿದುಬಂದಿಲ್ಲವೆಂದು ಅರ್ಥವೇ? ಸಮುದ್ರ ಕೊರೆತ ತಪ್ಪಿಸಲು ತಡೆ ಗೋಡೆಗಳನ್ನು ನಿರ್ಮಿಸುವ ಉದ್ದೇಶ ಏನಾದರೂ ಇದೆಯೇ?

ಶ್ರೀ ಆರ್.ಎನ್. ಲಕ್ಷ್ಮಿಪತಿ.—ಈ ಸಲದ ಆಯವ್ಯಯದಲ್ಲಿ ಇದಕ್ಕಾಗಿ ೭೦ ಲಕ್ಷ ರೂಪಾಯಿಗಳನ್ನಿಟ್ಟಿದ್ದೇವೆ. ಮುಂದಿನ ಬಜೆಟ್‌ನಲ್ಲಿ ಇದಕ್ಕೆ ಇನ್ನೂ ಹೆಚ್ಚಿನ ಹಣ ಇಡಬೇಕಾಗುತ್ತದೆ. ಎಲ್ಲೆಲ್ಲಿ ಈ ರೀತಿ ಸಮುದ್ರದಿಂದ ಕೊರೆತ ಸಂಭವಿಸುತ್ತದೆ. ಅಲ್ಲೆಲ್ಲಾ ತಡೆ ಗೋಡೆಗಳನ್ನು ಕಟ್ಟಿಸಲು ಪ್ರಯತ್ನ ಮಾಡುತ್ತೇವೆ. ಈಗ ''ಕೋಡಿ'' ಎಂಬಲ್ಲಿ ತಡೆ ಗೋಡೆ ಕಟ್ಟಿಸಲು ೧೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇದಕ್ಕೆ ಅಂದಾಜನ್ನು ತಯಾರಿಸಲಾಗಿದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳು

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಇನ್ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಹುಕ್ಕೇರಿ ತಾಲ್ಲೂಕಿನ (೧) ಅಂಕಲಿ (೨) ಮಾರಗುಪ್ಪಿ (೩) ರಾತಿನ (೪) ಬೋಳುಸ್ಯಾನಟ್ಟಿ ಕೆರೆಗಳ ನಿರ್ಮಾಣದ ಬಗ್ಗೆ

೩೨ (೧೨೫) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಅಂಕಲಿ ಕೆರೆಯ ನಿರ್ಮಾಣಕ್ಕಾಗಿ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಅ) ಈ ಬಗ್ಗೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರದಿಂದ ತಡವಾಗುತ್ತಿರುವುದಕ್ಕೆ ಕಾರಣವೇನು?

ಇ) ಮಾಸರಗುಪ್ಪಿ ಹಾಗೂ ರಾಶಿನ್ ಬೋಳುಸ್ಯಾನಟ್ಟಿ ಈ ಕೆರೆಗಳ ನೀಲ ನಕ್ಷೆ ಹಾಗೂ ಜಮೀನನ್ನು ವಶಪಡಿಸಿಕೊಳ್ಳಲು ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು?

ಈ) ಈ ಎಲ್ಲ ಕಾಮಗಾರಿಗಳ ಅಂದಾಜು ವೆಚ್ಚ ವೆಷ್ಟು?

ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಸದರಿ ಕೆಲಸವು ೮೩-೮೪ನೇ ವರ್ಷದ ಅಂದಾಜು ಪತ್ರಿಕೆಯಲ್ಲಿ ಸೇರಿಲ್ಲದೆ ಇರುವುದರಿಂದ, ಈ ಕೆಲಸದ ನಿರ್ಮಾಣಕ್ಕಾಗಿ ಯಾವ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ.

ಆ) ಮೇಲೆ ವಿಶದೀಕರಿಸಿದ ಕಾರಣಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಮೂರು ಕೆಲಸಗಳು ಯಾವ ನೀರಾವರಿ ಯೋಜನೆಯಲ್ಲಿಯೂ ಸೇರಿಲ್ಲದೆ ಇರುವುದರಿಂದ, ನೀಲ ನಕ್ಷೆ ತಯಾರಿಕೆ ಮತ್ತು ಜಮೀನು ವಶಪಡಿಸಿಕೊಳ್ಳುವ ಪ್ರಶ್ನೆಯೂ ಉದ್ಭವಿಸುವುದಿಲ್ಲ.

ಈ) (ಅ)ನಲ್ಲಿ ಹೇಳಿರುವ ಉತ್ತರ ರೀತ್ಯ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗುಳೇದಗುಡ್ಡ ಮಂತ ಕ್ಷೇತ್ರವನ್ನು ಔದ್ಯೋಗಿಕವಾಗಿ ಹಿಂದುಳಿದ ಪ್ರದೇಶವೆಂದು ಸಾರುವ ಬಗ್ಗೆ

೩೩ (೧೭೮) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ) ಗುಳೇದಗುಡ್ಡ ಕ್ಷೇತ್ರವು ಔದ್ಯೋಗಿಕ ದೃಷ್ಟಿಯಿಂದ ಹಿಂದುಳಿದ ಪ್ರದೇಶ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಕ್ಷೇತ್ರವನ್ನು ಹಿಂದುಳಿದ ಔದ್ಯೋಗಿಕ ಕ್ಷೇತ್ರ ಎಂದು ಪರಿಗಣಿಸಲಾಗುವುದೇ?

ಇ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು?

ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ಹೌದು.

ಆ) ಸರ್ಕಾರಿ ಆಜ್ಞೆ ಸಿಐ ೧೨೧ ಎಸ್‌ಪಿಸಿ ೮೨ ದಿನಾಂಕ ೩೦-೧೦-೮೨ರ ಪ್ರಕಾರ ಬಾದಾಮಿ ತಾಲ್ಲೂಕಿನ ಗುಳೇದಗುಡ್ಡವನ್ನು ಕೈಗಾರಿಕಾ ಹಿಂದುಳಿದ ಪ್ರದೇಶವೆಂದು ಘೋಷಿಸಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಆನೆಗಳ ಸಂಖ್ಯೆ

೩೪ (೧೯೫) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ಕರ್ನಾಟಕದಲ್ಲಿ ಸರ್ಕಾರಿ ಆಶ್ರಯದಲ್ಲಿ ಇರುವ ಆನೆಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಬಿಳಿ ಆನೆಗಳ ಸಂಖ್ಯೆ ಎಷ್ಟು ಮತ್ತು ಸದರಿ ಬಿಳಿ ಆನೆಗಳ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರಕ್ಕಿದೆಯೇ ?